

## ದೊಡ್ಡ ಕನಸನ್ನು ನನಸಾಗಿಸಿಕೊಂಡ ದೊಡ್ಡವರ ಕಥನ

# ಕನಸು ಕಲ್ಪವೃಕ್ಷ

‘ಬಾನಿಗೊಂದು ಎಲ್ಲೆ ಎಲ್ಲಿದೆ’ ಎನ್ನುವ ಗೀತೆ ಕನಸಿಗೂ ಅನ್ವಯಿಸುವಂತಹದ್ದು. ಎಲ್ಲೆ ಇಲ್ಲದ ಕನಸುಗಳಲ್ಲಿ ರಮ್ಯ ರೋಚಕ ಬಿಂಬಗಳು ಇರುವಂತೆ, ಮನಸ್ಸನ್ನು ಗಾಸಿಗೊಳಿಸುವ ವಾಸ್ತವದ ಪ್ರತಿಬಿಂಬಗಳೂ ಇರುವುದಿದೆ. ಕನಸುಗಳನ್ನು ನಿರ್ಲಕ್ಷಿಸುವವರು ಇರುವಂತೆ, ಕನಸುಗಳ ಬೆನ್ನೇರಿ ಅವುಗಳನ್ನು ನನಸು ಮಾಡಿಕೊಳ್ಳುವ ಧೀರರೂ ಇದ್ದಾರೆ. ಕನಸು ಕಾಣದವರು ಯಾರೂ ಇಲ್ಲ; ಕನಸುಗಳನ್ನು ನನಸು ಮಾಡಿಕೊಂಡವರ ಸಂಖ್ಯೆ ವಿರಳವಷ್ಟೇ. ವಿಶ್ವವಿಖ್ಯಾತರಿಗೆ ಬಿದ್ದ ಸ್ವಾರಸ್ಯಕರ ಕನಸುಗಳ ಕುರಿತ ಇಲ್ಲಿನ ಟಿಪ್ಪಣಿಗಳು, ಅವುಗಳು ನನಸಾದ ಬಗೆಯನ್ನೂ ಚಿತ್ರಿಸಿವೆ. ಕನಸುಗಳು ನನಸಾದ ಈ ಕಥನ ಕನಸುಗಾರರಿಗೆಲ್ಲ ಸ್ಫೂರ್ತಿ ನೀಡುವಂತಿದೆ.

■ ಗುರುರಾಜ್ ಎಸ್. ದಾವಣಗೆರೆ
ಕಲೆ: ಸಂತೋಷ್ ಸಸಿಹಿತ್ಲು